# ಸ್ಫೂರ್ತಿದಾಯಕ ಪಾತ್ರಗಳ ಆಶಯ

# ನಿಶಾ

■ ಸುಮಲತಾ ಎನ್‌.



'ಗಟ್ಟಿಮೇಳ' ಧಾರಾವಾಹಿ ಖ್ಯಾತಿಯ ನಟಿ ನಿಶಾ ರವಿಕೃಷ್ಣನ್ 'ಅಂಶು' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಸ್ಫೂರ್ತಿದಾಯಕ ಕಥೆಗಳಲ್ಲಿ ನಟಿಸುವ ಆಶಯ ಹೊಂದಿರುವ ಅವರಿಗೆ, ಆ ಹಾದಿಯಲ್ಲಿ 'ಅಂಶು' ಮೊದಲ ಪ್ರಯತ್ನವೂ ಆಗಿದೆಯಂತೆ. ತಮ್ಮ ಮೊದಲ ಸಿನಿಮಾ ಕೊಟ್ಟ ಅನುಭವಗಳನ್ನು ಅವರಿಲ್ಲಿ ಹಂಚಿಕೊಂಡಿದ್ದಾರೆ.

◆ **ಧಾರಾವಾಹಿಯಿಂದ ಸಿನಿಮಾರಂಗಕ್ಕೆ ಕಾಲಿಟ್ಟಿದ್ದೀರಿ. ಮೊದಲ ಸಿನಿಮಾ ಅನುಭವ ಹೇಗಿದೆ?**

ಮೊದಲ ಸಿನಿಮಾ ಅನುಭವ ಆಸಕ್ತಿದಾಯಕವಾಗಿದೆ. ಸಿನಿಮಾ ಹೆಸರು 'ಅಂಶು'. ನಾನೇ ಇಲ್ಲಿ ಅಂಶು. ಮಹಿಳಾ ಪ್ರಧಾನ ಚಿತ್ರ, ಒಂದು ರೀತಿ ಪ್ರಯೋಗಾತ್ಮಕ ಸಿನಿಮಾ ಕೂಡ. ಸಿನಿಮಾದಲ್ಲಿ ಹೊಸ ಹೊಸ ಪ್ರಯತ್ನಗಳಿವೆ. ಕಥೆಯೂ ಭಿನ್ನ ಧಾಟಿಯದ್ದು, ಕಮರ್ಷಿಯಲ್ ಸೂತ್ರದ ಹೊರತಾಗಿಯೂ ವಿಭಿನ್ನ ಜಾನರ್ ಈ ಸಿನಿಮಾದ ಪ್ಲಸ್ ಪಾಯಿಂಟ್. ಸಿನಿಮಾದಿಂದ ಹೊಸ ಹೊಸ ತಾಂತ್ರಿಕ ವಿಷಯಗಳನ್ನು ಕಲಿತುಕೊಂಡಿದ್ದೇನೆ. ಹೊಸಬರದ್ದೇ ಸಿನಿಮಾ ತಂಡ. ಎಲ್ಲರಲ್ಲೂ ಸಿನಿಮಾ ಎಂದರೆ ಹುಮ್ಮಸ್ಸಿದೆ. ಹೀಗಾಗಿ ಸಿನಿಮಾ ಜನರಿಗೆ ಮೆಚ್ಚುಗೆಯಾಗುವ ವಿಶ್ವಾಸವಿದೆ, ನನಗೂ ಕುತೂಹಲಕಾರಿ ಎನಿಸಿದೆ.

◆ **ಚಿತ್ರಕಥೆಯಲ್ಲಿ ನಿಮ್ಮನ್ನು ಸೆಳೆದ ಅಂಶ?**

ನನಗೆ ಸಿನಿಮಾದಲ್ಲಿ ನಟಿಸುವ ಯೋಜನೆ ಸದ್ಯಕ್ಕೆ ಇರಲಿಲ್ಲ. ಎರಡು ಧಾರಾವಾಹಿಗೆ ಒಪ್ಪಿಗೆ ನೀಡಿದ್ದರಿಂದ ಸಮಯವೂ ಇರಲಿಲ್ಲ. ಹೀಗಾಗಿ ಮುಂದೆ ನೋಡೋಣ ಎಂದು ಸುಮ್ಮನಿದ್ದೆ. ಆದರೆ ಈ ಕಥೆ ಕೇಳಿದಾಗ ಆಸಕ್ತಿದಾಯಕ ಅನ್ನಿಸಿತು. ನರೇಷನ್‌ನಿಂದ ಆರಂಭವಾಗಿ ತಂಡದ ಪ್ರತಿ ಕೆಲಸ ಕೂಡ ಪ್ರೊಫೆಷನಲ್ ಅನಿಸಿತು. ಎಲ್ಲವೂ ಯೋಜನಾಬದ್ಧವಾಗಿತ್ತು. ಜೊತೆಗೆ ಮಹಿಳಾ ಪ್ರಧಾನ ಚಿತ್ರ. ಕನ್ನಡದಲ್ಲಿ ಈಗ ಮಹಿಳಾ ಪ್ರಧಾನ ಚಿತ್ರಗಳು ಬರುತ್ತಿದ್ದರೂ ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಹೀಗಾಗಿ ಈ ಸಿನಿಮಾ ನನಗೆ ಉತ್ತಮ ಅವಕಾಶ ಎನಿಸಿತು. ನಾನು ಇಡೀ ಸಿನಿಮಾದ ಕೇಂದ್ರಬಿಂದು.

◆ **ಧಾರಾವಾಹಿ ಏನೇನು ಕಲಿಸಿಕೊಟ್ಟಿದೆ?**

ನಟನೆಯ ಮೂಲ ತಂತ್ರಗಳನ್ನು ಧಾರಾವಾಹಿ ಕಲಿಸಿಬಿಡುತ್ತದೆ. ವೇಗವಾಗಿ, ಸಮರ್ಥವಾಗಿ ಕೆಲಸ ಮಾಡುವುದನ್ನೂ ಕಲಿಸುತ್ತದೆ. ದಿನದಲ್ಲಿ 20–30 ಸೀನ್‌ಗಳನ್ನು ಮಾಡುವಷ್ಟು ಧಾರಾವಾಹಿಯಲ್ಲಿ ಪಳಗಿಬಿಡುವುದರಿಂದ ಸಿನಿಮಾದಲ್ಲಿ ನಟನೆ ಸಲೀಸಾಗುತ್ತದೆ.

◆ **ನಟನೆಯೊಂದಿಗೆ ಏನೆಲ್ಲಾ ಹವ್ಯಾಸಗಳು ನಿಮ್ಮ ಜೊತೆಯಿವೆ?**

ಧಾರಾವಾಹಿಯಲ್ಲಿ, ಸಿನಿಮಾಗಳಲ್ಲಿ ನಟಿಸಬೇಕು ಎಂಬ ಆಲೋಚನೆ ನನ್ನಲ್ಲಿ ಇರಲಿಲ್ಲ. ನಮ್ಮ ಮನೆಯಲ್ಲಿ ಓದು ಮಾತ್ರವಲ್ಲ, ಶಾಸ್ತ್ರೀಯ ಸಂಗೀತ, ನೃತ್ಯದಲ್ಲಿ ತೊಡಗಿಕೊಳ್ಳುವಂತೆ ಚಿಕ್ಕ ವಯಸ್ಸಿನಿಂದಲೇ ಪ್ರೇರೇಪಿಸಿದ್ದರು. ಶಾಸ್ತ್ರೀಯ ಸಂಗೀತ, ಭರತನಾಟ್ಯ, ಪಾಶ್ಚಾತ್ಯ ನೃತ್ಯ ಕಲಿತಿದ್ದೇನೆ. ಸ್ಟೇಜ್ ಶೋಗಳನ್ನು ಮಾಡುತ್ತಿದ್ದೆ. ಚಿಂಟು ವಾಹಿನಿಯಲ್ಲಿ ನಿರೂಪಕಿಯಾಗಿ ಸೇರಿದೆ. ಅದಾಗುತ್ತಿದ್ದಂತೆ 'ಸರ್ವಮಂಗಳ ಮಾಂಗಲ್ಯೆ' ಲುಕ್‌ಟೆಸ್ಟ್‌ಗೆ ಹೋದೆ. ಅಲ್ಲಿ ಆಯ್ಕೆಯಾದೆ. ಆಮೇಲೆ ಮೈನಾ, ಗಟ್ಟಿಮೇಳ ಧಾರಾವಾಹಿಯಲ್ಲಿ ನಟಿಸಿದೆ.

◆ **ಬಣ್ಣದ ಲೋಕದಲ್ಲಿ ನಿಮ್ಮ ಕನಸುಗಳೇನು?**

ಎಲ್ಲರಿಗೂ ಒಂದು ಕನಸು ಇದ್ದೇ ಇರುತ್ತದೆ. ಆದರೆ ನನ್ನ ಕನಸು, ಏನು ಮಾಡಿದರೂ ಸ್ಫೂರ್ತಿದಾಯಕವಾಗಿರಬೇಕು ಎಂಬುದು. ಯಾವಾಗಲೂ ಕೆಲಸ ಮಾಡುತ್ತಿರಬೇಕು. ಧಾರಾವಾಹಿ ಇರಲಿ, ಸಿನಿಮಾ ಆಗಿರಲಿ, ಕೆಲಸ ಮಾಡುತ್ತಿರಬೇಕು ಅಷ್ಟೆ. ಜೊತೆಗೆ ಬೇರೆ ಬೇರೆ ರೀತಿಯ ಪಾತ್ರಗಳ ಅನುಭವಗಳು ಆಗಬೇಕು. ನನ್ನ ಸಾಮರ್ಥ್ಯವನ್ನು ನಾನು ಕಂಡುಕೊಳ್ಳಬೇಕು.

◆ **ಸದ್ಯ ಯಾವ ಪ್ರಾಜೆಕ್ಟ್‌ನಲ್ಲಿ ತೊಡಗಿಕೊಂಡಿದ್ದೀರಿ?**

ಸಿನಿಮಾ ಅವಕಾಶಗಳು ಬಂದವು. ಆದರೆ ಎರಡು ಧಾರಾವಾಹಿಗಳಿಗೆ ಒಪ್ಪಿಗೆ ನೀಡಿದ್ದರಿಂದ ಅದರಲ್ಲಿದ್ದೇನೆ. ಕನ್ನಡ ಮತ್ತು ತೆಲುಗು ಭಾಷೆಯ ಧಾರಾವಾಹಿ ಮಾಡುತ್ತಿದ್ದೇನೆ. ■